**<u>ಸಾಕ್ಷಿಯನ್ನು ದಿನಾಂಕಃ 13.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಬಿ.ವೈ, ವಕೀಲರಿಂದಃ</u>**

ನನ್ನ ಗಂಡನ ತಂದೆಗೆ ಒಟ್ಟು ಮೂರು ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ಕೆಂಡಗಣ್ಣಪ್ಪ ಮೊದಲನೇ ಮಗನಾಗಿದ್ದು, ನನ್ನ ಗಂಡ 2 ನೇ ಮಗನಾಗಿರುತ್ತಾರೆ ಎಂದರೆ ಸರಿ. 1 ಮತ್ತು 2 ನೇ ಆರೋಪಿಗಳು ನನ್ನ ಮಾವನ 3 ನೇ ಮಗ ಸುಬ್ಬಪ್ಪರವರ ಮಕ್ಕಳಾಗಿರುತ್ತಾರೆ ಎಂದರೆ ಸರಿ. ಮೊದಲನೆ ಮಗ ಕೆಂಡಗಣ್ಣಪ್ಪ ಅವರಿಗೆ ಸೇರಿದ ಭಾಗವನ್ನು ನಮ್ಮ ಕುಟುಂಬದಿಂದ ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ನಂತರ ನನ್ನ ಗಂಡ ಕುಟುಂಬದ ಯಜಮಾನನಾಗಿ ಕುಟುಂಬದ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ಗಂಡ ಇರುವಾಗ ವ್ಯವಸಾಯ ವೃತ್ತಿ ಬಿಟ್ಟು ಬೇರೆ ಕೆಲಸ ಮಾಡುತ್ತಿರಲಿಲ್ಲ. ನನ್ನ ಗಂಡ ಹಲವಾರು ಜಮೀನುಗಳನ್ನು ತನ್ನ ಹೆಸರಿನಲ್ಲಿ ಪಡೆದಿರುತ್ತಾರೆ ಎಂದರೆ ವಿಭಾಗವಾದ ನಂತರ ಪಡೆದಿರುತ್ತಾರೆ. ನನ್ನ ಗಂಡನ ಹೆಸರಿನಲ್ಲಿ ಸುಮಾರು 10 ಎಕರೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ವಿಭಾಗವಾದ ನಂತರ ಖರೀದಿಸಿರುತ್ತಾರೆ. ವಿಭಾಗದ ಮೂಲಕ ನನ್ನ ಗಂಡನಿಗೆ ಸುಮಾರು 7 ಎಕರೆ ಬಂದಿರುತ್ತದೆ ಎಂದರೆ ನಮಗೆ ಯಾವುದೇ ಜಮೀನು ಕೊಟ್ಟಿರುವುದಿಲ್ಲ. ಸುಬ್ಬಪ್ಪರವರ ಭಾಗಕ್ಕೆ ಬಂದ 6 ಎಕರೆ ಜಮೀನನ್ನು ಆರೋಪಿಗಳೇ ಉಳುಮೆ ಮಾಡುತ್ತಿದ್ದಾರೆ ಎಂದರೆ ನಮ್ಮ ಜಮೀನನ್ನು ಕೂಡ ಉಳುಮೆ ಮಾಡುತ್ತಿದ್ದಾರೆ.

ಈ ಪ್ರಕರಣವನ್ನು 3 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ದಾಖಲಿಸಿರುತ್ತೇನೆ ಎಂದರೆ ಸರಿ. ಸದರಿ 3 ಎಕರೆ ಜಮೀನನ್ನು ನನ್ನ ಗಂಡನ ಹೆಸರಿನಲ್ಲಿ ಖರೀದಿಸಲಾಗಿತ್ತು ಎಂದರೆ ಅವರೆ ಸಂಪಾದನೆ ಮಾಡಿ ತೆಗೆದುಕೊಂಡಿರುತ್ತಾರೆ. ನನ್ನ ಗಂಡ ಒಟ್ಟು ಕುಟುಂಬದಲ್ಲಿದ್ದಾಗ ಕುಟುಂಬದ ಆದಾಯದಿಂದ ಬಂದ ಹಣದಿಂದ ನನ್ನ ಗಂಡನ ಹೆಸರಿನಲ್ಲಿ ಖರೀದಿಸಿರುತ್ತಾರೆ

ಎಂದರೆ ಸರಿಯಲ್ಲ. ಸದರಿ ಜಮೀನು ಒಟ್ಟು ಕುಟುಂಬದ ಆಸ್ತಿಯಾಗಿದ್ದರಿಂದ ವಿಭಾಗದ ಮೂಲಕ ಸುಬ್ಬಪ್ಪರವರ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಸುಬ್ಬಪ್ಪರವರೇ ತನ್ನ ಜೀವಿತಾವಧಿಯಲ್ಲಿ ಸದರಿ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದು, ಅವರು ಮೃತಪಟ್ಟ ನಂತರ 1 ಮತ್ತು 2 ನೇ ಆರೋಪಿಗಳು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ನನ್ನ ಗಂಡನ ಹೆಸರಿನಲ್ಲಿರುವ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ನಾನು ಜಮೀನನ್ನು ಬಿಡಿಸಿಕೊಡಿ ಎಂದು ಪೊಲೀಸರಿಗೆ ದೂರು ಕೊಟ್ಟಿದ್ದೆ. ಸದರಿ ಜಮೀನಿನ ಸ್ವಾಧೀನ ಕೋರಿ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಸರ್ವೆ ನಂ. 218 ರಲ್ಲಿರುವ 3 ಎಕರೆ ಜಮೀನನ್ನು ಚಾಸಾ–2 ಮತ್ತು 3 ರವರಿಗೆ ಕ್ರಯಕ್ಕೆ ಕೊಟ್ಟಿರುತ್ತೇವೆ ಎಂದು ತೋರಿಸಲು ಕ್ರಯಪತ್ರವನ್ನು ಹಾಜರುಪಡಿಸಿಲ್ಲ. ನಾನು ಹೇಳಿದಂತೆ ಅಂತಹ ಯಾವುದೇ ಕ್ರಯವಾಗಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿನ ಕ್ರಯಪತ್ರ ಮತ್ತು ಪಹಣಿ ಪತ್ರಿಕೆ ನನ್ನ ಗಂಡನ ಹೆಸರಿನಲ್ಲಿರುವುದರಿಂದ ಅದನ್ನು ದುರುಪಯೋಗಪಡಿಸಿಕೊಂಡು ಆರೋಪಿಗಳ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–2 ಮತ್ತು 3 ರವರ ಜೊತೆ ಸೇರಿ ನಾನೇ ಗಲಾಟೆ ಮಾಡಿ ಆರೋಪಿಗಳಿಗೆ ತೊಂದರೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ದೂರನ್ನು ಚಾಸಾ–2 ರವರೇ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಚಾಸಾ–2 ರವರಿಗೆ ಜಮೀನನ್ನು ಮಾರಾಟ ಮಾಡಲು ಒಪ್ಪಿಕೊಂಡಿರುತ್ತೇನೆ ಎಂದರೆ ಅವರಿಗೆ ಕೊಟ್ಟಿರುತ್ತೇನೆ. ಮಹಜರ್ ನಲ್ಲಿ ಏನು ಬರೆದಿರುತ್ತಾರೆ ಎಂದು ನಿಮಗೆ ಗೊತ್ತಿಲ್ಲ ಎಂಬ ಪ್ರಶ್ನೆಗೆ ಪೊಲೀಸರು ಬಂದು ಗಲಾಟೆಯ ಬಗ್ಗೆ ಬರೆದುಕೊಂಡಿರುತ್ತಾರೆ. ಚಾಸಾ–5 ನನಗೆ ತಮ್ಮನಾಗಬೇಕು ಎಂದರೆ ಸರಿ. ಚಾಸಾ–6 ನನ್ನ ತಂಗಿಯ ಮಗ ಎಂದರೆ ಸರಿ, ಅವರು

ಮೃತಪಟ್ಟಿರುತ್ತಾರೆ ಎಂದರೆ ಅವರು ಬದುಕಿರುತ್ತಾರೆ. ಗಲಾಟೆ ಸಂದರ್ಭದಲ್ಲಿ ಅಕ್ಕ-ಪಕ್ಕದ ಜಮೀನಿನ ಬಾಜುದಾರರು ಯಾರು ಬಂದಿರಲಿಲ್ಲ. ನಾನು ಹೇಳಿದಂತೆ ಆರೋಪಿಗಳು ಯಾವುದೇ ಗಲಾಟೆ ಮಾಡದಿದ್ದರೂ ಸುಳುಳ ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಕಲೇಶಪ್ಪ ನನ್ನ ತಮ್ಮ ಮತ್ತು ಶಾರದ ನನ್ನ ತಂಗಿಯಾಗಿರುತ್ತಾರೆ ಎಂದರೆ ಸರಿ. ನನ್ನ ಗಂಡನಿಗೆ ಬಂದಂತಹ ಆಸ್ತಿಯನ್ನೊಳಗೊಂಡು ನನ್ನ ತಮ್ಮ ಮತ್ತು ನನ್ನ ತಂಗಿಗೆ ನೋಂದಾಯಿತ ವಿಭಾಗದ ಮೂಲಕ ಕೊಟ್ಟಿರುತ್ತೇನೆ ಎಂದರೆ ಸರಿ. ಇತ್ತೀಚೆಗೆ ಜಮೀನಿನ ಬೆಲೆಗಳು ಹೆಚ್ಚಾಗಿರುವುದರಿಂದ ನನ್ನ ಗಂಡನ ಹೆಸರಿನಲ್ಲಿರುವ ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ದುರುಪಯೋಗಪಡಿಸಿಕೊಂಡು ಆರೋಪಿಗಳಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಯಾವುದೇ ಕೊಲೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ 80 ವರ್ಷ ಪ್ರಾಯವಾಗಿರುತ್ತದೆ. ನನಗೆ ವಯಸ್ಸಾಗಿರುವುದರಿಂದ ಈಗ ನಾನು ಜಮೀನಿನ ಕೆಲಸಕ್ಕೆ ಹೋಗುತ್ತಿಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**

**ನಂಜನಗೂಡು.**